ಅ) ೧) ಕಾಣೆಯಾದ ಮಕ್ಕಳ ಬಗ್ಗೆ ಫಿರ್ಯಾದು ಬಂದ ತಕ್ಷಣ ಮೊಕದ್ದಮೆಗಳನ್ನು ದಾಖಲು ಮಾಡಿಕೊಂಡು ಪತ್ತೆಗಾಗಿ ತನಿಖೆ ನಡೆಸಲಾಗುತ್ತಿದೆ.

೨) ಸದರಿ ಮಕ್ಕಳ ಪತ್ತೆಗಾಗಿ ಪತ್ರಿಕೆಗಳಲ್ಲಿ ಅವರ ಭಾವ ಚಿತ್ರ ಮುದ್ರಿಸಲಾಗುತ್ತಿದೆ.

೩) ಅವರ ಭಾವ ಚಿತ್ರವಿರುವ ಚೀಟಿಗಳನ್ನು ಎಲ್ಲಾ ಪ್ರದೇಶಗಳಿಗೆ ಕಳಿಸಲಾಗುತ್ತಿದೆ.

೪) ರೇಡಿಯೋದಲ್ಲಿ ಪ್ರಸಾರ ಮತ್ತು ದೂರದರ್ಶನಗಳಲ್ಲಿ ಸದರಿ ಮಕ್ಕಳ ಭಾವ ಚಿತ್ರ ಮುತ್ತು ವಿವರ ಪ್ರದರ್ಶಿಸಲಾಗುತ್ತಿದೆ.

೫) ಬಸ್ ನಿಲ್ದಾಣ ರೈಲ್ವೆ ನಿಲ್ದಾಣ, ಶಾಲೆಗಳ ಬಳಿ ಮಕ್ಕಳನ್ನು ಅಪಹರಿಸುವವರ ಬಗ್ಗೆ ನಿಗಾ ಇಡಲಾಗಿದೆ.

೬) ಹಲವು ಪ್ರಕರಣಗಳಲ್ಲಿ ಪೋಷಕರು ನಿಖರವಾದ ಪಹರೆ ಮತ್ತು ಭಾವಚಿತ್ರಗಳನ್ನು ಕೊಡದ ಕಾರಣ ಮಕ್ಕಳನ್ನು ಪತ್ತೆ ಹಚ್ಚಲು ಕಷ್ಟವಾಗಿದೆ. ಆದರೂ ಲಭ್ಯವಿರುವ ಚಹರೆ ಪಡೆದು ಪತ್ತೆಗಾಗಿ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಪೋಲೀಸ್ ತರಬೇತಿ ಕೇಂದ್ರಗಳ ಸಂಖ್ಯೆ

೧೪೭೫. ಶ್ರೀ ಗೋಪಾಲ ಪಂಕಂದ ಕಾನಡೆ (ಸಿರ್ಸಿ).— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಪೋಲೀಸ್ ತರಬೇತಿ ಕೇಂದ್ರಗಳ ಸಂಖ್ಯೆಯೆಷ್ಟು ?

ಆ) ಈ ತರಬೇತಿ ಕೇಂದ್ರಗಳಿರುವುದು ಎಲ್ಲೆಲ್ಲಿ, ಹಾಗೂ ತರಬೇತಿ ಕೇಂದ್ರಕ್ಕೆ ಖರ್ಚಾಗುವ ಹಣವೆಷ್ಟು; ಎಷ್ಟೆಷ್ಟು ಜನರಿಗೆ ತರಬೇತಿ ನೀಡಿರುತ್ತಾರೆ. (ಪ್ರತಿ ತರಬೇತಿ ಕೇಂದ್ರದ ವಿವರ ನೀಡುವುದು) ?

ಇ) ಉತ್ತರ ಕನ್ನಡ ಜಿಲ್ಲೆ ಮಾಗೋಡುವಿನಲ್ಲಿ ಪೋಲೀಸ್ ತರಬೇತಿ ಕೇಂದ್ರ ಇರುವುದು ನಿಜವೇ ? ಈ ಕೇಂದ್ರಕ್ಕೆ ವರ್ಷಕ್ಕೆ ಖರ್ಚಾಗುವ ಹಣವೆಷ್ಟು (ವಿವರ ನೀಡುವುದು) ?

ಈ) ಈ ಮಾಗೋಡುವಿನಲ್ಲಿರುವ ಪೋಲೀಸ್ ತರಬೇತಿ ಕೇಂದ್ರವು ಮೊದಲು ಧಾರವಾಡ ಜಿಲ್ಲೆಯಲ್ಲಿದ್ದುದು ನಿಜವೇ ? ಹಾಗಿದ್ದಲ್ಲಿ ಆ ಜಾಗದಿಂದ ಮಾಗೋಡಿಗೆ ವರ್ಗಾಯಿಸಲು ಕಾರಣ ವೇನು ?

ಉ) ಧಾರವಾಡದಲ್ಲಿರುವಾಗ ಒಂದು ವರ್ಷಕ್ಕೆ ಖರ್ಚಾಗುತ್ತಿದ್ದ ಹಣವೆಷ್ಟು (ವಿವರ ನೀಡುವುದು) ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—

ಅ) ಒಂಭತ್ತು

ಆ) ವಿವರಗಳು ಕೆಳಕಂಡಂತಿವೆ.

ಕ್ರ. ಸಂ.	ತರಬೇತಿ ಶಾಲೆಯ ಹೆಸರು	ವಾರ್ಷಿಕ ಖರ್ಚು	ಒಂದು ವರ್ಷದಲ್ಲಿ ತರಬೇತಿ ಆಗಿರುವವರ ಒಟ್ಟು ಸಂಖ್ಯೆ (ಬೇಸಿಕ್ ಮತ್ತು ಇತರ ಅಲ್ಪಾವಧಿ ಕೋರ್ಸ್‌ಗಳು
೧	೨	೩	೪
		ರೂ.	
೧	ಪೋಲೀಸ್ ತರಬೇತಿ ಕಾಲೇಜು ಮೈಸೂರು	೩೦,೪೦,೯೭೫–೦೦	೧೯೫
೨	ಪೋಲೀಸ್ ತರಬೇತಿ ಶಾಲೆ, ಚನ್ನಪಟ್ಟಣ	೬೮,೭೯,೪೯೦–೦೦	೫೨೯
೩	ಪೋಲೀಸ್ ತರಬೇತಿ ಶಾಲೆ, ಮಾಗೋಡು	೨೭,೯೩,೯೪೫–೦೦	೩೦೬
೪	ಸಶಸ್ತ್ರ ಪೋಲೀಸ್ ತರಬೇತಿ ಶಾಲೆ ಸಿಎಆರ್, ಬೆಂಗಳೂರು	೧೪,೦೨,೫೫೨-೦೦	೩೫೮
೫	ಕೆಎಸ್ಆರ್‌ಪಿ ಸಶಸ್ತ್ರ ತರಬೇತಿ ಶಾಲೆ, ಖಾನಾಪುರ	೧೧ ೪೦,೫೫೯–೦೦	೫೦
೬	ಟ್ರಾಫಿಕ್ ತರಬೇತಿ ಶಾಲೆ, ಬೆಂಗಳೂರು	೯,೫೦,೭೬೯–೦೦	೨೧೨
೭	ಸ್ಪೆಷಲ್ ಬ್ರಾಂಚ್ ತರಬೇತಿ ಶಾಲೆ, ಬೆಂಗಳೂರು	೨,೧೧,೮೫೭–೧೦	೧೦೯
೮	ಪೋಲೀಸ್ ಡ್ರೈವಿಂಗ್ ಅಂಡ್ ಮೈಂಟೆನೆನ್ಸ್ ಸ್ಕೂಲ್, ಯಲಹಂಕ ಬೆಂಗಳೂರು	೭,೮೯,೦೧೩–೦೦	೧೬೪
೯	ಪೋಲೀಸ್ ವೈರಲೆಸ್ ತರಬೇತಿ ಶಾಲೆ ಬೆಂಗಳೂರು	೩,೭೯,೨೭೯–೦೦	೨೪

ಇ) ಮಹಾಗೋಡುವಿನಲ್ಲಿ ತರಬೇತಿ ಶಾಲೆ ಇದೆ. ಈ ಕೇಂದ್ರದ ವೆಚ್ಚದ ವಿವರಗಳು ಈ ಕೆಳಗಿನಂತಿವೆ.

೧	ಸಿಬ್ಬಂದಿ ಸಂಬಳ	೧೮,೭೩,೭೭೫-೦೦
೨	ಬಾಡಿಗೆ ತೆರಿಗೆ ಇತ್ಯಾದಿ	೭,೦೮,೫೨೬-೦೦
೩	ಕಛೇರಿ ವಿಚ್ರ್ಚು	೨೩.೯೫೬-೦೦
೪	ಇತರೆ ವಿಚ್ರ್ಚು	೩೫,೯೮೭-೦೦
೫	ಮೋಟಾರ್ ಸಾರಿಗೆ ವಿಚ್ರ್ಚು	೫೮,೯೯೬-೦೦
೬	ರಿವಾರ್ಡ್	೪,೦೦೦-೦೦
೭	ಪ್ರಕಟಣೆ	೫,೧೬೬-೦೦
೮	ಸಮವಸ್ತ್ರ ಪಂತ್ರು ಉಪಕರಣಗಳು	೩೭೪-೦೦
೯	ಪ್ರಯಾಣ ಭತ್ಯೆ	೯೩,೧೬೫-೦೦
	ಒಟ್ಟು	೨೭,೯೩,೯೪೫-೦೦

ಈ) ಧಾರವಾಡ ಜಿಲ್ಲೆ ರಾಯಾಪುರದಲ್ಲಿದ್ದ ಪೋಲೀಸ್ ತರಬೇತಿ ಶಾಲೆಯು ಹೆಚ್ಚಿನ ಸಂಖ್ಯೆಯಲ್ಲಿ ತರಬೇತಿ ನೀಡಲು ಅನಾನುಕೂಲವಾದ್ದರಿಂದ ಅದನ್ನು ಮಾಗೋಡಿಗೆ ವರ್ಗಾಯಿಸಲಾಯಿತು.

ಉ) ವಿವರಗಳು ಈ ಕೆಳಕಂಡಂತಿವೆ.

೧	ಸಿಬ್ಬಂದಿಗಳ ಸಂಬಳ	೧೦,೫೨,೬೨೮-೦೦
೨	ಕಛೇರಿ ವಿಚ್ರ್ಚು	೩೪.೭೨೦-೦೦
೩	ಬಾಡಿಗೆ ಮತ್ತು ತೆರಿಗೆ ಇತ್ಯಾದಿ	೪,೩೯,೫೦೪-೦೦
೪	ವೇಜಸ್ಸು	೫೦-೦೦
೫	ಇತರ ಚ್ರ್ಚು	೪೨,೮೫೭-೦೦
೬	ಮೋಟಾರ್ ಸಾರಿಗೆ	೧,೩೧,೮೫೪-೦೦
೭	ಪ್ರಯಾಣ ಭತ್ಯ	೨,೦೧,೨೩೭-೦೦
	ಒಟ್ಟು	೧೯,೦೨,೮೫೦-೦೦

ನಕಲಿ ಪತ್ರ ಪಡೆದು ನೌಕರಿಯಲ್ಲಿರುವವರು

೧೮೦೮. ಶ್ರೀ ಗೋಪಾಲ ಮಂಕುಂದ ಕಾನಡೆ (ಸಿರ್ಸಿ).— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ೧೯೮೬-೮೭ ಮತ್ತು ೧೯೮೭-೮೮ರಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಯಾವ ಯಾವ ಹುದ್ದೆಗಳಿಗೆ ಆಯ್ಕೆ ಮಾಡಲಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಆಯ್ಕೆಯಾದ ನಂತರ ನೇಮಕಾತಿ ಪಡೆದು ಎಷ್ಟು ಜನ ಕೆಲಸದಲ್ಲಿದ್ದಾರೆ ?